**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**

**ಸಿಸಿ.ನಂ.78/2025**

| | | |
|---|---|---|
| ಸಾಕ್ಷಿಯ ಹೆಸರು | ರೊಕಯ ತುಬ್ಸಂ | |
| ತಂದೆಯ ಹೆಸರು | ಸೈಯದ್ ಮುಜಮೀಲ್ ಅಹಮ್ಮದ್ | |
| ವಯಸ್ಸು | 24 ವರ್ಷ | |
| ಉದ್ಯೋಗ | ಗೃಹಣಿ | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಕೆ ಆರ್ ನಗರ | |

ದಿನಾಂಕಃ **22-12-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ದೂರುದಾರರು ನನ್ನ ಗಂಡನ ಸ್ನೇಹಿತ. ನಾನು ದೂರುದಾರರಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ ಮತ್ತು ಚೆಕ್ಕು ನೀಡಿರುವುದಿಲ್ಲ. ನನಗೆ ಸೇರಿದ ಚೆಕ್ಕನ್ನು ನನ್ನ ಗಂಡ ಸಾಲ ಪಡೆದುಕೊಂಡಿದ್ದು, ಸದರಿ ಸಾಲದ ಜಾಮೀನಿಗಾಗಿ ನೀಡಿರುತ್ತಾರೆ. ದೂರುದಾರರು ನನ್ನ ಗಂಡನಿಗೆ ಬೇರೆಯವರ ಹೆಸರಿನಲ್ಲಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ರೂ. 4,80,000/- ಹಣದ ಭದ್ರತೆಗಾಗಿ ದೂರುದಾರರು ನನ್ನಿಂದ ಮತ್ತು ನನ್ನ ಗಂಡನಿಂದ ಒಟ್ಟು 5 ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ. ದೂರು ದಾರರು ಹಣವನ್ನು ನನ್ನ ಖಾತೆಗೆ ಹಣ ವರ್ಗಾವಣೆ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ ಆದರೆ ಹಣ ವರ್ಗಾವಣೆ ಮಾಡಿರುವುದಿಲ್ಲ.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1) ನಾನು ದೂರಿನಲ್ಲಿ ತಿಳಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನ ಗಂಡ ಹಣ್ಣಿನ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಹಣ್ಣಿನ ವ್ಯಾಪಾರದ ಅಭಿವೃದ್ಧಿಗಾಗಿ ಸಾಲ ಮಾಡಿರುತ್ತಾರೆ ಎಂದರೆ ಸರಿ. ನನಗೆ ಕನ್ನಡ ಮತ್ತು ಆಂಗ್ಲಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿಶಾನೆ ಪಿ-01 ಚೆಕ್ಕಿನಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ನನ್ನ ಗಂಡ ಮತ್ತು ದೂರುದಾರರ ನಡುವೆ

ಸಿಸಿ.**ನಂ.78/2025**

ಯಾವ ವರ್ಷ ಕರಾರು ಪತ್ರ ಆಗಿರುತ್ತದೆ ಎಂದರೆ ನನಗೆ ನೆನಪಿರುವುದಿಲ್ಲ. ಕರಾರು ಪತ್ರವನ್ನು ಹಾಜರುಪಡಿಸಲು ತೋಂದರೆ ಇರುವುದಿಲ್ಲ. ನಾನು ದೂರುದಾರರಿಂದ ರೂ. 3,00,00/- ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಪ್ರದನ್ಯಾದಂ., ಕೆ.ಆರ್.ನಗರ.**